**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 347/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.06**

**ದಿನಾಂಕಃ 03.01.2026** **ಸಿಡಬ್ಲ್ಯೂ.05**

| | |
|---|---|
| ಹೆಸರು | ರಾಜು ಡಿ |
| ತಂದೆ ಹೆಸರು | ಲೇಟ್ ತಿಪ್ಪೇಸ್ವಾಮಿ |
| ವಯಸ್ಸು | 48 ವರ್ಷ |
| ಉದ್ಯೋಗ | ಪಿ ಐ |
| ವಾಸ ಸ್ಥಳ | ತುಮಕೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ 18.02.2023 ರಿಂದ 22.06.2023 ರವರೆಗೆ ಪಿ ಐ ಆಗಿ ಗ್ರಾಮಾಂತರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 09.03.2023 ರಂದು ಸಂಜೆ 6.30 ಗಂಟೆಗೆ ಪ್ರಕರಣದ ಕಡತವನ್ನು ಚಾಸಾ.6 ರವರಿಂದ ಪಡೆದು ತನಿಖೆ ಮುಂದುವರೆಸಿರುತ್ತೇನೆ. ಚಾಸಾ.1 ರವರಿಂದ ಚಾಸಾ.2 ಮತ್ತು 3 ರವರಿಗೆ ನೋಟಿಸ್ ನೀಡಿ ಸದರಿಯವರನ್ನು ಠಾಣೆಗೆ ಕರೆಸಿ ಪ್ರಕರಣದ ವಿದ್ಯಮಾನ ತಿಳಿಸಿ ಪಂಚರಾಗಿ ಸಹಕರಿಸಲು ಕೇಳಿಕೊಂಡಿದ್ದು ಸದರಿಯವರು ಒಪ್ಪಿರುತ್ತಾರೆ. ಸಾಕ್ಷಿಯು ಗುರುತಿಸಿದ ನೋಟಿಸನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5 (ಎ) ಎಂದು ಗುರುತಿಸಲಾಯಿತು. ನಂತರ ಸಿಬ್ಬಂದಿ ಹಾಗೂ ಪಂಚರನ್ನು ಕರೆದುಕೊಂಡು ಬನ್ನಿಕೋಡು ಗ್ರಾಮದ ಬಸ್ ನಿಲ್ದಾಣದ ಬಳಿ ಹೋಗಿ ಅಲ್ಲಿ ಸಿಬ್ಬಂದಿಗಳ ಮುಖಾಂತರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮಟ್ಕಾ ಜೂಜಾಟದಲ್ಲಿ ತೊಡಗಿರುವುದನ್ನು ಖಚಿತಪಡಿಸಿಕೊಂಡಿರುತ್ತೇನೆ. ಸದರಿ ವ್ಯಕ್ತಿ ಸಾರ್ವಜನಿಕರನ್ನು ಕರೆದು 1 ರೂ ಕಟ್ಟಿದರೆ 80 ರೂ ಕೊಡುತ್ತೇನೆ ಎಂದು ಸುಳ್ಳು ಆಶ್ವಾಸನೆ ನೀಡಿ ಮಟ್ಕಾ ಜೂಜಾಟದಲ್ಲಿ ತೊಡಗಿದ್ದನು, ಸದರಿ ವ್ಯಕ್ತಿಯನ್ನು ಪಂಚರ ಸಮಕ್ಷಮ ದಾಳಿ ಮಾಡಿ ಆತನ ಹೆಸರು ವಿಳಾಸ ಕೇಳಲಾಗಿ ಸದರಿ ವ್ಯಕ್ತಿ ಹೆಸರು ಕುಮಾರ, ಕಳ್ಳೆಗೊಂದಿ ಗ್ರಾಮ ಎಂದು ತಿಳಿಸಿದ್ದು ಪಂಚರ ಸಮಕ್ಷಮ ಆತನ ಅಂಗಶೋಧನೆ ಮಾಡಲಾಗಿ ಆತನ ಬಳಿ 2 ಮಟ್ಕಾ ಚೀಟಿಗಳು, 1 ಪೆನ್ ಹಾಗೂ 650/ ರೂ ನಗದು ಹಣ ಇತ್ತು. ನಂತರ ವ್ಯಕ್ತಿಯನ್ನು ವಿಚಾರಿಸಲಾಗಿ ಸದರಿ ಹಣವನ್ನು ಯಾರಿಗೆ ಕೊಡುತ್ತೀರಿ ಎಂದು ಕೇಳಲಾಗಿ ಅದೇ ಗ್ರಾಮದ ಚಂದ್ರಪ್ಪ ಎನ್ನುವವರಿಗೆ ನೀಡುತ್ತೆನೆ ಎಂದು ತಿಳಿಸಿರುತ್ತಾರೆ. ನಂತರ ಆತನು ಎಲ್ಲಿ ಇರುತ್ತಾನೆ ಎಂದು ಕೇಳಲಾಗಿ

ಸದರಿ ವ್ಯಕ್ತಿ ನಮ್ಮನ್ನು ಚಂದ್ರಪ್ಪನವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಆಗ ಚಂದ್ರಪ್ಪ ನಮ್ಮನ್ನು ನೋಡಿ ಗಾಬರಿಗೊಂಡ ಆತನನ್ನು ಹಿಡಿದು ವಿಚಾರಿಸಲಾಗಿ ಆತನು ಕುಮಾರ ತನಗೆ ಮಟ್ಕಾ ಹಣವನ್ನು ನೀಡುತ್ತಾನೆ ಎಂದು ಒಪ್ಪಿಕೊಂಡಿದ್ದು ಆತನ ಅಂಗಶೋದನೆ ಮಾಡಲಾಗಿ ಆತನ ಬಳಿ ಇದ್ದ ಒಂದು ಮಟ್ಕಾ ಚೀಟಿ ಹಾಗೂ 2010/ ರೂ ಹಣ ದೊರೆತಿರುತ್ತದೆ. ಸದರಿ ಹಣ, ಪೆನ್ ಗಳು ಮತ್ತು ಚೀಟಿಗಳನ್ನು ಪಂಚರ ಸಮಕ್ಷಮ ಸಂಜೆ 7.35 ರಿಂದ 8.45 ರವರೆಗೆ ಅಮಾನತು ಪಂಚನಾಮೆ ಜರುಗಿಸಿ ಜಪ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಗುರುತಿಸಿ ಅಮಾನತು ಪಂಚನಾಮೆಯನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1 (ಇ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ ಒಟ್ಟು 2660/ ರೂಗಳನ್ನು, 2 ಪೆನ್ ಮತ್ತು 3 ಚೀಟಿಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ 1 ರಿಂದ 3 ಎಂದು ಗುರುತಿಸಲಾಗಿದೆ. ಆರೋಪಿತರನ್ನು ವಶಕ್ಕೆ ಪಡೆದು, ಸದರಿ ಪಂಚನಾಮೆ ಹಾಗೂ ಜಪ್ತು ಪಡಿಸಿದ ಮಾಲನ್ನು ಚಾಸಾ.6 ರವರಿಗೆ ನೀಡಿರುತ್ತೇನೆ. ಜಪ್ತು ಪಡಿಸಿದ ಮಾಲು ಹಾಗೂ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದಲ್ಲಿ 2 ನೇ ಆರೋಪಿ ಚಂದ್ರಪ್ಪ ಇದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಬಿ ವಕೀಲರಿಂದಃ**

ಜಪ್ತು ಪಡಿಸಿಕೊಂಡ 2 ಪೆನ್ ಮತ್ತು ಮಟ್ಕಾ ಚೀಟಿಗಳ ವರ್ಣನೆಯನ್ನು ನಿಪಿ.1 ರಲ್ಲಿ ಬರೆದಿಲ್ಲ ಎಂದರೆ ಸರಿ. ಸದರಿಯವುಗಳು 1 ನೇ ಆರೋಪಿಗೆ ಸಂಬಂದಪಟ್ಟದ್ದವುಗಳು ಯಾವುವು ಮತ್ತು 2 ನೇ ಆರೋಪಿಗೆ ಸಂಬಂದಪಟ್ಟದ್ದವುಗಳು ಯಾವುವು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಸದರಿಯವುಗಳ ಮೇಲೆ ಪಂಚರ ಹಾಗೂ ನಮ್ಮಗಳ ಸಹಿವುಳ್ಳ ಚೀಟಿಯನ್ನು ಅಂಟಿಸಿಲ್ಲ ಎಂದರೆ ಸರಿ. ಸ್ಥಳದಲ್ಲಿ ನಾನು 1 ನೇ ಆರೋಪಿ ಹೇಳಿಕೆಯನ್ನು ಪಡೆದಿಲ್ಲ. ನಾವು ಸ್ಥಳಕ್ಕೆ ಹೋದಾಗ 2 ನೇ ಆರೋಪಿ ಸಾರ್ವಜನಿಕರಿಂದ ಯಾವುದೇ ಹಣ ಪಡೆದಿಲ್ಲ ಹಾಗೂ ಚೀಟಿಗಳ ಬಗ್ಗೆ ಕೂಗಿ ಏನನ್ನು ಹೇಳುತ್ತಿರಲಿಲ್ಲ ಎಂದರೆ ಸರಿ. 2 ನೇ ಆರೋಪಿ ಅವರ ಮನೆ ಮುಂದೆ ಕುಳಿತುಕೊಂಡು ಬರೆಯುತ್ತಿದ್ದ ಎಂದು ನಿಪಿ.1 ರಲ್ಲಿ ನಮೂದಿಸಿದ್ದು ಏನನ್ನು ಬರೆಯುತ್ತಿದ್ದ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ.1 ನ್ನು ಯಾರು ಯಾವುದರಿಂದ ಬೆರಳಚ್ಚು ಪಡಿಸಿರುತ್ತಾರೆ ಎಂದು ಅದರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ಬೆರಳಚ್ಚು ಗಾರರ ಸಹಿ ಇಲ್ಲ ಎಂದರೆ ಸರಿ. ನಿಪಿ.1 ನ್ನು ಯಾವುದರ ಸಹಾಯದಿಂದ ಪ್ರಿಂಟ್ ತೆಗೆಯಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ಸ್ಥಳದಲ್ಲಿ ಯಾವ ಯಾವ ವಸ್ತುಗಳನ್ನು ಯಾರಿಂದ ವಶಪಡಿಸಿಕೊಂಡಿದ್ದೇವೆ ಎಂದು 4 ಪ್ರತಿಗಳಲ್ಲಿ ಯಾದಿಯನ್ನು ತಯಾರಿಸಿ 1 ಪ್ರತಿಯನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣ ಅಸಂಜ್ಞೆಯ ಪ್ರಕರಣ ಎಂದರೆ ಸರಿ. ಆದ್ದರಿಂದ ಆರೋಪಿಯನ್ನು ವಶಕ್ಕೆ ಪಡೆಯುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಸ್ತಗಿರಿ ಮಾಡಲು ಅವಕಾಶ ಇಲ್ಲ ಎಂದು ನುಡಿಯುತ್ತಾರೆ. ಯಾರು ಯಾರು ಯಾರ ಅಂಗಶೋದನೆ ಮಾಡಿರುತ್ತಾರೆ ಎಂದು ನಿಪಿ.1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸ್ಥಳದಲ್ಲಿ ನಾವು ಅಂಗಶೋಧನೆ

ಮಾಡಿಕೊಂಡ ಬಗ್ಗೆ ನಿಪಿ.1 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಠಾಣೆಯನ್ನು ಬಿಡುವಾಗ ಪರಸ್ಪರ ಅಂಗಶೋದನೆ ಮಾಡಿಕೊಂಡಿದ್ದೆವು ಎಂದು ನುಡಿಯುತ್ತಾರೆ. ಪಂಚರನ್ನು ನಾನು ಠಾಣೆಗೆ ಕರೆಸಿದ್ದೆನು. ನಿಪಿ.5 ರಂತೆ ಪಂಚರಿಗೆ ಸ್ಥಳಕ್ಕೆ ಬರಬೇಕೆಂದು ನೋಟಿಸ್ ನೀಡಲಾಗಿದೆ ಎಂದರೆ ಸರಿ. ನಿಪಿ.5 ರಲ್ಲಿ ಸ್ಥಳಕ್ಕೆ ಬರಬೇಕಾದ ಸಮಯವನ್ನು ನಮೂದಿಸಿಲ್ಲ ಎಂದರೆ ಸರಿ. ಸ್ಥಳದಲ್ಲಿ ನಿಪಿ.1 ನ್ನು ಜರುಗಿಸುವ ಕಾಲಕ್ಕೆ ಛಾಯ ಚಿತ್ರ ಹಾಗೂ ಕಚ್ಚಾ ನಕಾಶೆ ತೆಗೆದಿಲ್ಲ ಎಂದರೆ ಸರಿ. ಆರೋಪಿತರ ಅಂಗಶೋದನೆ ಮಾಡಲು ಶೋಧನಾ ವಾರೆಂಟ್ ಅವಶ್ಯಕತೆ ಇಲ್ಲ. ನಿಪಿ.1 ರಲ್ಲಿ ಜಪ್ತು ಪಡಿಸಿಕೊಂಡ ಹಣದ ಮುಖಬೆಲೆ ಹಾಗೂ ನಂಬರಗಳನ್ನು ತಿಳಿಸಿಲ್ಲ ಎಂದರೆ ಸರಿ. ನಿಪಿ.1 ರಲ್ಲಿ 1 ನೇ ಆರೋಪಿಯಿಂದ ಹೇಗೆ ಮತ್ತು ಎಲ್ಲಿ 2010/ ಹಣ ದೊರೆತಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಬೇಟಿ ನೀಡಿಲ್ಲ, ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ